ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

3ನೇ ವರ್ಷ 33 ನೇ ಸಂಚಿಕೆ ಕೊಪ್ಪ 26-5-1985 ಭಾನುವಾರ ಬೆಲೆ 40 ಪೈಸೆ

ಕೊಪ್ಪ ಸರ್ಕಾರಿ ಆಸ್ಪತ್ರೆ ಕಟ್ಟಡ ಉದ್ಘಾಟನೆ:

ಆಡಳಿತ ವಿಭಾಗ ಕಟ್ಟಡಕ್ಕೆ 6 ಲಕ್ಷ ರೂ. ಕೊಡುಗೆ

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನೆ ಮೇ 24 ರಂದು ಆರೋಗ್ಯ ಮಂತ್ರಿ ಡಾ|| ಹೆಚ್. ಎಲ್. ತಿಮ್ಮೇಗೌಡರಿಂದ ನಡೆಯಿತು. ಅದರೊಟ್ಟಿಗೇ, ಆಸ್ಪತ್ರೆಗೆ ಅತ್ಯಗತ್ಯವಾಗಿದ್ದ ಆಡಳಿತ ವಿಭಾಗ ಕಟ್ಟಡದ ಹಣಕಾಸಿನ ಸಮಸ್ಯೆಯೂ ಬಗೆಹರಿಯಿತು.

ಗೋವಿಂದ ಗೌಡರ ಪ್ರಯತ್ನ ಮತ್ತು ಡಾ||ಹೆಚ್.ಎಲ್. ತಿಮ್ಮೇಗೌಡ, ಹೆಚ್. ಡಿ. ದೇವೇಗೌಡ ಇವರುಗಳ ಮನವಿಯ ಮೇರೆಗೆ ಎಂ.ಡಿ. ಬಾಲಕೃಷ್ಣ ಅವರು ಸದರಿ ಕಟ್ಟಡದ ನಿರ್ಮಾಣ ವೆಚ್ಚವಾದ 6 ಲಕ್ಷ ರೂ. ಗಳನ್ನು ನೀಡಲು ತಮ್ಮ ಒಪ್ಪಿಗೆಯನ್ನು ಸಭೆಯಲ್ಲಿ ಪ್ರಕಟಿಸಿದರು.

ಈ ಕಟ್ಟಡ ಹಾಗೂ 8 ಲಕ್ಷ ರೂ. ಮಂಜೂರಾಗಿರುವ ಪ್ರ.ದ. ಕಾಲೇಜಿನ ವಿಸ್ತರಣ ಕಟ್ಟಡ ಇವೆರಡೂ ಶೀಘ್ರವಾಗಿ ಆಗುವುದೆಂದು ಆಶಿಸಿದ ಅವರು, ಪ್ರ.ದ. ಕಾಲೇಜಿನ ವಿಜ್ಞಾನ ವಿಭಾಗವನ್ನು ಈ ವರ್ಷವೇ ಮಂಜೂರು ಮಾಡುವಂತೆ ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿದ್ದ ಹೆಚ್. ಡಿ. ದೇವೇಗೌಡರು, ಈ ದೇಣಿಗೆಗಾಗಿ ಎಂ. ಡಿ. ಬಿಳಗವನ್ನು ಶ್ಲಾಘಿಸಿದರಲ್ಲದೆ, ಕಾಲೇಜಿನ ಕ್ರೀಡಾಂಗಣಕ್ಕೆ 42 ಸಾವಿರ ರೂ. ದೇಣಿಗೆ ನೀಡಿರುವ ಬಾಲಕೃಷ್ಣ ಅವರನ್ನು ಹಾರ ಹಾಕಿ ಗೌರವಿಸಿದರು.

ಡಾ|| ತಿಮ್ಮೇಗೌಡ ಮಾತನಾಡಿ, ಹಾಲಿ 30 ಹಾಸಿಗೆಗಳ ಈ ಆಸ್ಪತ್ರೆಯಲ್ಲಿ ಈಗಿರುವ ಸ್ಥಳದಲ್ಲೇ 50 ಹಾಸಿಗೆ ಒದಗಿಸುವುದು ಸಾಧ್ಯ. ಗೋವಿಂದ ಗೌಡರು ಅದನ್ನು ಕೇಳುತ್ತಿದ್ದಾರೆ. ಅದಕ್ಕೆ ಇನ್ನೂ ಬಹಳ ಮಂದಿ ಸಿಬ್ಬಂದಿ ಬೇಕಾಗುತ್ತದೆ. ಆದರೆ ಊರಿನವರು ಇಷ್ಟು ಕೊಡುಗೆಗಳಿಂದ ಮುಂದೆ ಬರುತ್ತಿರುವುದರಿಂದ ದೇವೇ ಗೌಡರ ಸಹಕಾರದೊಂದಿಗೆ ಮಂತ್ರಿಮಂಡಲದಲ್ಲಿ ಅದನ್ನು ಮಂಜೂರು ಮಾಡಿಸುತ್ತೇನೆಂದರು.

ಇದಲ್ಲದೆ, ಆಸ್ಪತ್ರೆಯ ಅಡಿಗೆ ಮನೆ ಕಟ್ಟಡಕ್ಕೆ ಬೇಕಾಗುವ 2 ಲಕ್ಷ ರೂ. ಗಳಲ್ಲಿ 1 ಲಕ್ಷ ರೂ. ಎನ್‌ಆರ್‌ಇಪಿ ಯಿಂದ ಕೊಡುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದ್ದು ಇನ್ನೊಂದು ಲಕ್ಷ ರೂ. ಸರ್ಕಾರದಿಂದ ಕೊಡುತ್ತೇವೆ. ಕಾಂಪೌಂಡ್‌ಗಾಗಿ 40,000 ರೂ. ಗಳನ್ನು ಬೇರೆಡೆಯಿಂದ ಸಂಗ್ರಹಿಸುವುದಾಗಿ ಗೋವಿಂದಗೌಡರು ಹೇಳಿದ್ದಾರೆ. ಎಲ್ಲ ಸೇರಿ ಇನ್ನು ಒಂದೂವರೆ ವರ್ಷದೊಳಗೆ ಸುಸಜ್ಜಿತವಾದ ಸಂಪೂರ್ಣ ಆಸ್ಪತ್ರೆ ಆಗುತ್ತದೆ. ಎಕ್ಸ್-ರೇ, ಪ್ರಯೋಗ ಶಾಲೆ ಎಲ್ಲ ಇದ್ದು, ರೋಗಿಗಳು ಚಿಕ್ಕಮಗಳೂರಿಗೆ ಸಹ ಹೋಗುವ ಅಗತ್ಯ ಇರುವುದಿಲ್ಲ ಎಂದು ಅವರು ಆಸ್ಪತ್ರೆಯ ಭವಿಷ್ಯದ ಭವ್ಯ ಚಿತ್ರವನ್ನು ಸಭಿಕರೆದುರು ಬಿಡಿಸಿದರು.

ಆಸ್ಪತ್ರೆಗೆ ದಿ|| ಎಂ.ಎಸ್. ದೇವೇ ಗೌಡರ ಮತ್ತು ಅವರ ಶ್ರೀಮತಿಯವರ ಹೆಸರನ್ನಿಡುವುದಾಗಿಯೂ, ದಿ|| ದೇವೇಗೌಡರ ಪ್ರತಿಮೆ (ಬಸ್ಟ್) ಸ್ಥಾಪಿಸುವುದಾಗಿಯೂ ಅವರು ಘೋಷಿಸಿದರು. ಹೊಸ ಕಟ್ಟಡಕ್ಕಾಗಿ 6 ಲಕ್ಷರೂ. ಕೊಡುಗೆ ನೀಡಿದ್ದಕ್ಕಾಗಿ ಅವರು ಬಾಲಕೃಷ್ಣ ಅವರಿಗೆ ಪುನಃ ಹಾರ ಹಾಕಿ ಸನ್ಮಾನಿಸಿದರು.

ಅಧ್ಯಕ್ಷತೆ ವಹಿಸಿದ್ದ ಗೋವಿಂದ ಗೌಡರು, ಆಸ್ಪತ್ರೆಯ ಮತ್ತು ಕಾಲೇಜಿನ ಈ ಎಲ್ಲ ಕಟ್ಟಡಗಳನ್ನೂ ಲೋಪ ದೋಷಗಳಿಲ್ಲದಂತೆ ಶೀಘ್ರವಾಗಿ ಕಟ್ಟಿಸುವ ಆಶಯ ವ್ಯಕ್ತಪಡಿಸಿದರು. ಎಂ.ಡಿ. ಯವರಿಗೆ ಈ 6 ಲಕ್ಷ ರೂ. ದೇಣಿಗೆಯ ಮೇಲೆ ಕೃಷಿ ಆದಾಯ ತೆರಿಗೆಯಿಂದ ವಿನಾಯ್ತಿ ಕೊಡಿಸಲು ಸಾಧ್ಯವೆ ಎಂದು ಪ್ರಯತ್ನಿಸುವುದಾಗಿ ತಿಳಿಸಿದರು.

ಆಸ್ಪತ್ರೆ ಸಮಿತಿ ಅಧ್ಯಕ್ಷರಾದ ಪಿ. ಜಿ. ಗುರ್ಜರ್ ಸ್ವಾಗತಿಸಿದರು. ಡಾ|| ಜಗದೀಶ್ ವರದಿ ಓದಿದರು. ಚಿನ್ನಪ್ಪ ಹೆಗ್ಡೆ ವಂದಿಸಿದರು.

ಕಟ್ಟಡ ಉದ್ಘಾಟನೆಗೆ ಅಡ್ಡಿ ಬಂದ ರಾಹುಕಾಲ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಬೆಳಿಗ್ಗೆ 10ಗಂಟೆಗೆ ಉದ್ಘಾಟನೆಯೆಂದು ಜನರನ್ನು ಸೇರಿಸಿ, "ರಾಹು ಕಾಲದ ನಿಮಿತ್ತ" 12ಗಂಟೆ 5 ನಿಮಿಷಕ್ಕೆ ಉದ್ಘಾಟನೆ ಮಾಡಿದ ಘಟನೆ ಇಲ್ಲಿ ಮೇ 24 ರಂದು ನಡೆಯಿತು.

ಇಲ್ಲಿನ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಉದ್ಘಾಟನೆಗೆ ನಾಲ್ವರು ಮಂತ್ರಿಗಳು ಸಕಾಲದಲ್ಲಿ ಬಂದಿದ್ದರು. ಆದರೆ ಅಷ್ಟರಲ್ಲಿ ಅಲ್ಲಿದ್ದ ಗೌರವಾನ್ವಿತರೊಬ್ಬರು ರಾಹುಕಾಲದ ನೆನಪು ಮಾಡಿದ್ದರಿಂದ ಆ ಕಾಲವನ್ನು ಮಠಕ್ಕೆ ಗುರುದರ್ಶನಕ್ಕೆ ವಿನಿಯೋಗಿಸಿದರು.

ಹೀಗೆ ನಿರ್ಗುಣವಾದ ಕಾಲಕ್ಕೆ ಸಾಪೇಕ್ಷವಾಗಿ ಆರೋಪಿಸುವ ರಾಹುಕಾಲದ ದೆಸೆಯಿಂದ ಎರಡು ಗಂಟೆ ಕಾದು ಕುಳಿತ ಜನರ ಮುಗ್ಧತೆ ಕಂಡಾಗ ಪ್ರಾಯಶಃ ಈ ದೇಶದ ಜನ ತಮಗೆ ಎಂಥ ಶೋಷಣೆ ಕಾರ್ಪಣ್ಯಗಳು ಎರಗಿದರೂ ಸಹಿಸಿಕೊಂಡು ಗತಿಶೀಲತೆಯನ್ನು ಕಳೆದುಕೊಂಡಿದ್ದಾರೆ ಎನ್ನಿಸುತ್ತದೆ ಅಲ್ಲವೆ?

ಜಾತ್ಯತೀತತೆಯ ಪರಿಕಲ್ಪನೆ

ಸಭೆಯಲ್ಲಿ ಮಾತನಾಡಿದ ಮಂತ್ರಿಗಳು ಸಾರ್ವಜನಿಕ ಹಾಸ್ಟೆಲ್ ಎಳೆ ವಯಸ್ಸಿನಲ್ಲಿ ಜಾತ್ಯತೀತತೆಯ ಪರಿಕಲ್ಪನೆ ತರುವುದೆಂದರು. ಉದ್ಘಾಟನೆ ಮಾಡಿದ ಸಮಾಜಕಲ್ಯಾಣ ಸಚಿವೆ ಡಾ|| ಪುಷ್ಪಾವತಿ ಈಗಿರುವ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ವಿಶೇಷ ಸವಲತ್ತು ಅಗತ್ಯ. ಬಡ ಹೆಣ್ಣು ಮಕ್ಕಳಿಗೆ ಶೇ. 20 ರಿಂದ 30 ರವರೆಗೆ ಮೀಸಲಾತಿ ಇರಿಸಬೇಕೆಂದು ಅಭಿಪ್ರಾಯ ಪಟ್ಟರು.

ಎನ್.ಆರ್.ಇ.ಪಿ. ಯ ಹಣ (1.82 ಲಕ್ಷ) ಇಂಥ ಸದುದ್ದೇಶಕ್ಕೆ ವ್ಯಯವಾದುದಕ್ಕೆ ಸಂತಸಪಟ್ಟ ದೇವೇಗೌಡ, ಕಟ್ಟಡದ ಯಾವುದೇ ನ್ಯೂನತೆಗಳ ಬಗ್ಗೆ ಅಧಿಕಾರಿಗಳನ್ನು ಎಚ್ಚರಿಸಿದರು. ಡಾ|| ತಿಮ್ಮೇಗೌಡ ಇಲ್ಲಿ 30 ಮಕ್ಕಳಿಗೆ ಅವಕಾಶವಿದ್ದರೂ ಕೇವಲ 19 ಮಕ್ಕಳಿರುವುದಕ್ಕೆ ವಿಷಾದಿಸಿ, ಹೆಚ್ಚು ಮಕ್ಕಳಿಗೆ ವ್ಯವಸ್ಥೆ ಕಲ್ಪಿಸಿ, ಊಟ-ವಸತಿಗಳನ್ನು ಆರೋಗ್ಯಕರ ಮಟ್ಟದಲ್ಲಿ ನೋಡಿಕೊಳ್ಳಲು ಸೂಚಿಸಿದರು.

ಗೋವಿಂದ ಗೌಡರು ಅಧ್ಯಕ್ಷತೆ ವಹಿಸಿದ್ದರು. ಸಭಿಕರ ಸಂದೇಹಕ್ಕೆ ಪ್ರತಿಯಾಗಿ ದೇವೇಗೌಡರು, ಯಾವ ಕಾರಣಕ್ಕೂ ಶೃಂಗೇರಿ-ಕೆರೆಕಟ್ಟೆ-ಮಂಗಳೂರು ರಸ್ತೆ ಕಾಮಗಾರಿ ನಿಲ್ಲುವುದಿಲ್ಲ. ಬಜೆಟ್ಟಿನಲ್ಲಿ ಅದಕ್ಕೆ 32 ಲಕ್ಷ ರೂ. ಒದಗಿಸಿದ್ದು, ಈ ವರ್ಷ ಅದರಲ್ಲಿ 3 ಲಕ್ಷ ರೂ. ಬಳಸಲಾಗುವುದು ಎಂದು ಭರವಸೆ ಕೊಟ್ಟರು.

ಸಾಮಾಜಿಕ ಅರಣ್ಯ ಯೋಜನೆ ವಿ|| ಸಂಕಿರಣ

ಹರಿಹರಪುರ: ರಾಜ್ಯ ಸರ್ಕಾರದ 55 ಕೋಟಿ ರೂ. ವಿಶ್ವ ಬ್ಯಾಂಕ್ ಸಾಲ ಆಧಾರಿತ "ಸಾಮಾಜಿಕ ಅರಣ್ಯ ಯೋಜನೆ" ಕುರಿತು ವಿಚಾರ ಸಂಕಿರಣವೊಂದು ಅರಣ್ಯ ಇಲಾಖೆಯ ಆಶ್ರಯದಲ್ಲಿ ಇಲ್ಲಿಗೆ ಸಮೀಪದ ಅರಣ್ಯ ನರ್ಸರಿಯಲ್ಲಿ ಮೇ 23 ರಂದು ಪಿ. ಜಿ. ಗುರ್ಜರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಿವಮೊಗ್ಗ ವೃತ್ತ ಅರಣ್ಯ ಸಂರಕ್ಷಕರಾದ ಜಿ. ಎ. ಬಲಗಣ್ಣವರ್ ಉದ್ಘಾಟನೆ ಮಾಡಿದರು.

ಡಿ.ಎಫ್.ಒ. ವಿನಯ್‌ಲೂಥ್ರ ಕನ್ನಡದಲ್ಲಿ ಸ್ವಾಗತಭಾಷಣ ಮಾಡಿದರು. ಇಲಾಖೆಯ ಅಧಿಕಾರಿಗಳಾದ ನಾ. ಗೋಪಾಲ ಪೂಜಾರಿ, ಧರ್ಮಪಾಲ್, ರುದ್ರಯ್ಯ ಹಾಗೂ ಸಹಾಯಕ ಕೃಷಿ ನಿರ್ದೇಶಕರಾದ ಎಂ ಎಸ್. ಸುಬ್ಬಯ್ಯ ಗೌಡ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು.

ಅನಂತರ ಹಲವಾರು ಜನ ಆಹ್ವಾನಿತರು ಮತ್ತು ಪ್ರತಿನಿಧಿಗಳು ಮಾತನಾಡಿ ಬಹಳ ವಿಚಾರಪೂರಿತವಾದ ಹಲವು ಸಲಹೆಗಳನ್ನು ಸರ್ಕಾರದ ಮುಂದಿಟ್ಟರು.

ಈ ಎಲ್ಲಾ ವಿಚಾರ, ಸಲಹೆ ಮತ್ತು ಬೇಡಿಕೆಗಳನ್ನು ಕ್ರೋಢೀಕರಿಸಿ ಸುಮಾರು 20 ನಿರ್ಣಯಗಳನ್ನು ಸಭೆಯಲ್ಲಿ ಮಂಡಿಸಿ ಅನುಮೋದಿಸಲಾಯಿತು. ಅಲ್ಲದೆ, ಈ ನಿರ್ಣಯಗಳ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಹಾಗೂ ಅದು ತೆಗೆದುಕೊಂಡ ಕ್ರಮಗಳನ್ನು ಇನ್ನು ಒಂದು ಅಥವಾ ಒಂದೂವರೆ ತಿಂಗಳೊಳಗಾಗಿ ಎಲ್ಲಾ ಆಹ್ವಾನಿತರಿಗೂ ಪ್ರತಿನಿಧಿಗಳಿಗೂ ತಲುಪಿಸಬೇಕೆಂದೂ ಸಭೆ ನಿರ್ಣಯಿಸಿತು.

ಸಂಜೆ ಗುರ್ಜರ್ ಅಧ್ಯಕ್ಷತೆಯಲ್ಲಿ ಸಂಕಿರಣದ ಸಮಾರೋಪವನ್ನು ಹೆಚ್.ಜಿ. ಗೋವಿಂದ ಗೌಡ ನೆರವೇರಿಸಿದರು.

[ಮೂರನೇ ಪುಟವನ್ನೂ ನೋಡಿ.]

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 26-5-1985

ಸರಕು: 2766 – 3110

ಬೆಟ್ಟೆ: 2360 – 2500

ಗೊರಬಲು: 1746 – 1985

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
14.5.85	295	201
15.5.85	256	102
16.5.85	186	131
17.5.85	315	137

ಬಿಕ್ಕಳಿ ವ್ಯ. ಸೇ. ಸಹಕಾರ ಸಂಘದಲ್ಲಿ ಶೇ. 80 ವಸೂಲಿ;

ಸಕಾಲದಲ್ಲಿ ಅಲ್ಪಾವಧಿ ಸಾಲ ವಿತರಣೆ

(ನಮ್ಮ ಪ್ರತಿನಿಧಿಯಿಂದ)

ನಿಲುವಾಗಿಲು: ಈ ಸಾಲಿನ ಅಲ್ಪಾವಧಿ ಸಾಲದ ಮೊದಲ ಕಂತಾಗಿ 3.80 ಲಕ್ಷರೂ. ಗಳನ್ನು 94 ಜನ ರೈತರಿಗೆ ಇಲ್ಲಿನ ಬಿಕ್ಕಳಿ ವ್ಯ.ಸೇ. ಸಹಕಾರ ಸಂಘ ವಿತರಣೆ ಮಾಡಿದೆ. ಈ ಪೈಕಿ 71 ಜನ ಸಣ್ಣ ಮತ್ತು ಅತಿಸಣ್ಣ ರೈತರಿಗೆ 1,62,500 ರೂ. ಹಾಗೂ 23 ದೊಡ್ಡ ರೈತರಿಗೆ 2,17,500 ರೂ. ಹಂಚಲಾಗಿದೆ.

ಕಳೆದ ಸಾಲಿನಲ್ಲಿ ಕೊಟ್ಟ ಸಾಲದಲ್ಲಿ ಶೇ. 80 ಭಾಗ ವಸೂಲಾಗಿದ್ದು, ಈ ಸಲ ಸಕಾಲದಲ್ಲಿ ಸಾಲ ಮಂಜೂರಾಗಿದೆ. 2 ನೇ ಕಂತಿನಲ್ಲಿ 1.5 ಲಕ್ಷ ರೂ. ಬರುವ ಅಂದಾಜಿದೆ.

ಸರ್ಕಾರದ ಬಡ್ಡಿ ವಿಯಾಯ್ತಿಯ ಕಾರ್ಯಕ್ರಮದ ಪ್ರಯೋಜನವನ್ನು ಅನುಕೂಲಸ್ಥರೂ ಸೇರಿದಂತೆ ಬಹು ಹೆಚ್ಚಿನ ರೈತರು ಪಡೆಯುತ್ತಿದ್ದಾರೆ. ಆದರೆ 1982 ರ ಸಾಲಿನ ಸಾಲಗಾರರು ಮಾತ್ರ ಯಾವುದೇ ವಿಯಾಯ್ತಿಯ ವ್ಯಾಪ್ತಿಗೊಳಪಡದ ಪರಿಣಾಮವಾಗಿ, ತಾವು ಕಟ್ಟಿದ ಬಡ್ಡಿಯ ಬಗ್ಗೆ ವಾದಾಗಿಲ್ಲ ಸಂಕಟಪಡುತ್ತಿದ್ದಾರೆ.

ಕಿರಿಯ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ : ಕೆಲ ಪ್ರತಿಕ್ರಿಯೆಗಳು

ವೇದಿಕೆ

ಪ್ರತಿಕ್ರಿಯೆ-1

ಮಾನ್ಯರೆ,

ಇದು ನಿಮ್ಮ ಪತ್ರಿಕೆಯ 19-5-85 ರ ಸಂಚಿಕೆಯಲ್ಲಿ 'ಇಂಗ್ಲಿಷ್ ಮಾಧ್ಯಮದ ಶಿಶುವಿಹಾರ'ಗಳ ವಿಚಾರದಲ್ಲಿ ಬಂದ ಲೇಖನಕ್ಕೆ ಒಂದು ಪ್ರತಿಕ್ರಿಯೆ.

ಇಂಗ್ಲಿಷ್ ಮಾಧ್ಯಮದ ಒಳಿತು-ಕೆಡಕುಗಳ ಬಗ್ಗೆ ಈಗಾಗಲೇ ದೇಶದಾದ್ಯಂತ, ಗಾಂಧೀಜಿ, ರವೀಂದ್ರನಾಥ ಟಾಗೂರ್ ಮತ್ತು ಕುವೆಂಪು ರನ್ನೊಳಗೊಂಡಂತೆ ಅನೇಕ ಧೀಮಂತರೂ ಶಿಕ್ಷಣವೇತ್ತರೂ ಚರ್ಚಿಸಿರುವುದು ಪತ್ರಿಕೆಗಳಲ್ಲಿ ಅನೇಕ ಬಾರಿ ಪ್ರಕಟವಾಗಿದ್ದು ಆಸಕ್ತಿಯುಳ್ಳವರು ಓದಿಯೇ ಇರುತ್ತಾರೆ. ಆದ್ದರಿಂದ ಆ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗದೆ ಅವುಗಳ ಪೈಕಿ ಎರಡು ಅಂಶಗಳನ್ನು ಮಾತ್ರ ಪುನರುಚ್ಚರಿಸುತ್ತೇನೆ. (ಒಂದು) ಇಂಗ್ಲಿಷ್ ಮಾಧ್ಯಮ ಎಳೆಯ ಮಕ್ಕಳಿಗೆ ಹೊರೆಯಾಗುತ್ತದೆ. ತಾವು ತಮ್ಮ ಪರಿಸರದಲ್ಲಿ ಕಾಣುವ ವಸ್ತು, ವಿಷಯಗಳನ್ನು ತಮ್ಮ ಮಾತೃ ಭಾಷೆಯಲ್ಲಿ ಅರ್ಥಮಾಡಿಕೊಂಡು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವಷ್ಟು ಸುಲಭವಾಗಿ ಮಕ್ಕಳು ಪರಕೀಯವಾದ ಇಂಗ್ಲಿಷ್‌ನಲ್ಲಿ ಅರ್ಥೈಸಿಕೊಳ್ಳಲಾರರು. (ಎರಡು) ವೈಜ್ಞಾನಿಕವಾಗಿ ಪಾಶ್ಚಾತ್ಯ ರಾಷ್ಟ್ರಗಳಷ್ಟೇ ಮುಂದುವರಿದ ಜಪಾನ್, ಚೀನಾ ಮತ್ತು ರಷ್ಯಾದಂತಹ ಅನೇಕ ದೇಶಗಳಲ್ಲಿ ಶಿಕ್ಷಣ ಮಾಧ್ಯಮ ಅವರವರ ಮಾತೃಭಾಷೆಯಲ್ಲಿಯೇ ಇದೆ. ಮತ್ತು ನೊಬೆಲ್ ಪ್ರಶಸ್ತಿ ಪಡೆದವರಿದ್ದಾರೆ. ಅದೇ ಇಂಗ್ಲಿಷ್ ಮಾಧ್ಯಮದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಭಾರತೀಯರ ಪೈಕಿ ನೊಬೆಲ್ ಪ್ರಶಸ್ತಿ ಗಳಿಸುವ ಮಟ್ಟಿನ ಪ್ರೌಢತ್ವವನ್ನು ಎಷ್ಟು ಜನ ತೋರಿಸಿದ್ದಾರೆ? ಅಂದರೆ, ಪ್ರೌಢಿಮೆಗೂ ಇಂಗ್ಲಿಷ್ ಮಾಧ್ಯಮಕ್ಕೂ ತಳುಕು ಹಾಕುವುದು ತರವಲ್ಲ.

ಇದು ಇಂಗ್ಲಿಷ್ ಮಾಧ್ಯಮದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ತಮಗೆ ಹೊಸ ವಿಷಯಗಳನ್ನು ತಿಳಿಯುವ ಆಸಕ್ತಿಯಿದ್ದಾಗ ಬೆಳೆಯುವ ಮಕ್ಕಳಿಗೆ ಅರಿಯದ ಭಾಷೆಯಿಂದಾಗಿ ಸಾಕಷ್ಟು ತೊಡಕುಗಳು ಎದುರಾದಾಗ ಸಹಜವಾಗಿ ಅವರು ಪ್ರಶ್ನಿಸುವುದನ್ನೂ ಆ ಮೂಲಕ ಜ್ಞಾನಾರ್ಜನೆ ಮತ್ತು ಪ್ರಯೋಗ ಶೀಲತೆಯನ್ನೂ ಕಳೆದುಕೊಳ್ಳುತ್ತಾರೆ. ಮುಂದೆಂದೂ ಅವರಿಗೆ ಆ ಗುಣ ಮೈಗಂಟುವುದಿಲ್ಲ ಮತ್ತು ಸಿದ್ಧಪಡಿಸಿದ ಗ್ರಂಥಸ್ಥವಾದದ್ದನ್ನು ಮಾತ್ರ ತಿಳಿದುಕೊಳ್ಳುತ್ತಾರೆ. ಅವರ ಬೌದ್ಧಿಕ ಮಟ್ಟ ಸಂಬಳ, ಸೌಲಭ್ಯಗಳೇ ಪರಮಾದರ್ಶವಾಗಿರುವ ಈಗ ಇರುವ ವಿವಿಧ ಇಲಾಖಾ ಮುಖ್ಯರು/ಯೋಜನಾವೇತ್ತರು/ ವಿಜ್ಞಾನಿಗಳಿಗಿಂತ ಹೆಚ್ಚಿನದಾಗುವ ಸಂಭವವಿರುವುದಿಲ್ಲ.

ಇವು ಹೆಚ್ಚು ಪ್ರಚಾರದಲ್ಲಿರುವ ಅಭಿಪ್ರಾಯಗಳಾದರೆ, ಇನ್ನೂ ತೀವ್ರವಾದ ಪರಿಣಾಮ ಬೀರಬಲ್ಲ, ಹೆಚ್ಚು ಚರ್ಚಿತವಾಗದ ಅಂಶಗಳನ್ನು ಹೇಳ ಬಯಸುತ್ತೇನೆ. ಮೊದಲನೆಯದಾಗಿ ಸರ್ಕಾರಿ ಶಾಲೆಗಳ ಪರಿಸ್ಥಿತಿ. ಇಂಗ್ಲಿಷ್ ಮಾಧ್ಯಮಗಳಲ್ಲಿ ಮಕ್ಕಳನ್ನು ಓದಿಸಬಲ್ಲವರು ಕೇವಲ ಹಣಕಾಸಿನ ಸ್ಥಿತಿ ಉತ್ತಮವುಳ್ಳ, ಪ್ರಭಾವವುಳ್ಳ ಶ್ರೀಮಂತರು, ರಾಜಕಾರಣಿಗಳು ಮತ್ತು ಅಧಿಕಾರಿಗಳು ಮಾತ್ರ. ಅವರುಗಳು ಸರ್ಕಾರಿ ಶಾಲೆಗಳನ್ನು ಬೆಳೆಸತೊಡಗಿಧರೆ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಕೇಳುವವರಿಲ್ಲವಾಗುತ್ತದೆ.

ಮೊದಲೇ ಸಾಕಷ್ಟು ಶಿಕ್ಷಕರಿಲ್ಲದೆ, ಸೌಲಭ್ಯಗಳಿಲ್ಲದೆ, ಕೊನೆಗೆ ಕಟ್ಟಡವೂ ಇಲ್ಲದೆ ಸೊರಗಿರುವ ಸರ್ಕಾರಿ ಶಾಲೆಗಳ ಪರವಾಗಿ ಸರ್ಕಾರದೊಂದಿಗೆ ಹೋರಾಡುವವರಾಗಲೀ, ಹಣಕಾಸಿನ ಸಹಾಯವನ್ನು ಮಾಡುವವರಾಗಲೀ, ಶಿಕ್ಷಕ ವರ್ಗದಲ್ಲಿ ಕೆಲವರು ತೋರಿಸಬಹುದಾದ ಆಟಾಟೋಪ, ಔದಾಸೀನ್ಯಗಳನ್ನು ಘಟ್ಟಿಸಿ ಕೇಳುವವರಾಗಲೀ ಇಲ್ಲವಾಗುತ್ತಾರೆ. ಪ್ರಭಾವಿಗಳ ಸ್ವಲ್ಪ ಶ್ರಮದಿಂದ ಉತ್ತಮಗೊಳ್ಳಬಹುದಾದ ಶಾಲೆಗಳೂ ಸಹ ಕ್ರಮೇಣ ದೊಡ್ಡಿಗಳಾಗುತ್ತವೆ. ಇಂತಹ ಶಾಲೆಗಳಿಗೆ ಮಕ್ಕಳನ್ನು ಕಳಿಸುವ ಕೂಲಿ, ರೈತಾಪಿ, ಜನ ಸಾಮಾನ್ಯರು ತಮ್ಮ ದೈನಂದಿನ ಜೀವನದ ಸಮಸ್ಯೆಗಳ ಮಧ್ಯೆ ಈ ವಿಚಾರದಲ್ಲಿ ಆಸಕ್ತಿಯನ್ನು ತೋರಿಸಲಾರರು (ಅಂತಹ ಸಂಘಟನಾ ಶಕ್ತಿಯಾಗಲೀ, ಹೋರಾಟ ಮನೋಭಾವವಾಗಲೀ ಇದ್ದಿದ್ದರೆ ಇಂತಹ ಸಾಮಾಜಿಕ, ಆರ್ಥಿಕ ಅಸಮಾನತೆಗಳೇ ಇರುತ್ತಿರಲಿಲ್ಲವಷ್ಟೆ.) ಹಾಗಾಗಿ ಸರ್ಕಾರೀ ಶಾಲೆಗಳ ಸ್ಥಿತಿ ಮತ್ತೂ ಕೆಳಮಟ್ಟಕ್ಕೆ ಹೋಗಿ ಶಾಲೆಗೆ ಮಕ್ಕಳನ್ನು ಕಳಿಸಲು ಹೆದರುವ ಸ್ಥಿತಿ ಬರುತ್ತದೆ. ಕಳಿಸಿದಂತೆ ದಾಖಲೆಗಳು ಸೃಷ್ಟಿಯಾದಾವು ಅಷ್ಟೆ.

ಇನ್ನೊಂದು ಮುಖ್ಯ ಸಮಸ್ಯೆ ಅಂದರೆ ಉತ್ತರ ಪತ್ರಿಕೆಗಳ ಮೌಲ್ಯಮಾಪನ. ಇಂಗ್ಲಿಷ್‌ನಲ್ಲಿ ಬರೆದ ಉತ್ತರಗಳು ಹೇಗೇ ಇದ್ದರೂ ಆ ಉತ್ತರಗಳಿಗೆ ಕೊಡುವಷ್ಟು ಗುಣಾಂಕಗಳನ್ನು ಕನ್ನಡ ಮಾಧ್ಯಮದಲ್ಲಿ ಎಷ್ಟೇ ಕೂಲಂಕುಶವಾಗಿ ಉತ್ತರಿಸಿದ್ದರೂ ಕೊಡುವುದಿಲ್ಲವೆಂಬ ದೂರು. ಇದು ಮೌಲ್ಯಮಾಪಕರ ಕೀಳರಿಮೆಯೋ, ಅಥವಾ ಇಂಗ್ಲಿಷ್ ವಿದ್ಯಾರ್ಥಿಗಳು ಹೆಚ್ಚು ಬುದ್ಧಿವಂತರೆಂಬ ಭಾವನೆಯೋ ಅಥವಾ ಆ ವಿದ್ಯಾರ್ಥಿಗಳ ಪಾಲಕ ಪೋಷಕರ ವಿಚಾರದಲ್ಲಿ ಅಪ್ರತ್ಯಕ್ಷ ಭಯವೋ, ಅಥವಾ ಅವರ ಸಂಪತ್ತಿನ ಬಗ್ಗೆ ಆರಾಧನಾ ಭಾವವೋ ಒಟ್ಟಿನಲ್ಲಿ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಸಿಕ್ಕಷ್ಟು ರ್‍ಯಾಂಕ್‌ಗಳು ಕನ್ನಡ ವಿದ್ಯಾರ್ಥಿಗಳಿಗೆ ಸಿಕ್ಕುವುದಿಲ್ಲ. ಒಂದೇ ಶಾಲೆಯಲ್ಲಿ ಕನ್ನಡ/ಇಂಗ್ಲಿಷ್ ಮಾಧ್ಯಮಗಳೆರಡೂ ಇದ್ದು ಜಾಣರೆಂದು ಪರಿಗಣಿಸಲ್ಪಟ್ಟ ವಿದ್ಯಾರ್ಥಿಗಳ ಪೈಕಿ ಸಮಾನ ಬುದ್ಧಿವಂತರಿದ್ದರೂ ಇಂಗ್ಲಿಷ್ ವಿದ್ಯಾರ್ಥಿ ಹೆಚ್ಚು ಅಂಕ ಗಳಿಸುತ್ತಾನೆ. ಕನ್ನಡ ವಿದ್ಯಾರ್ಥಿ ಕಡಿಮೆ ಗಳಿಸಿರುತ್ತಾನೆ. ಇದು ವಿದ್ಯಾರ್ಥಿಗಳ ಅನುಭವಕ್ಕೆ ಬಂದ ವಿಚಾರ ಮತ್ತು ಮೇಲು ನೋಟಕ್ಕೆ ಸತ್ಯವೆಂದು ಕಂಡುಬರುವಂಥದು.

ಮೂರನೆಯದಾಗಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಬಗ್ಗೆ ಸಾಮಾಜಿಕ ಅಸಡ್ಡೆ. ಶಾಲೆಯಲ್ಲಿಯಾಗಲೀ, ಹೊರಗಡೆಯಾಗಲೀ ನಗರಗಳಲ್ಲಿ ಮೊದಲು ವಿಚಾರಿಸುವುದು ಆತ ಯಾವ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಎಂದು. ಆತ ಇಂಗ್ಲಿಷ್ ಮಾಧ್ಯಮವಾಗಿದ್ದರೆ ಬುದ್ಧಿವಂತನೆಂದೂ ಕನ್ನಡ ಮಾಧ್ಯಮವಾಗಿದ್ದರೆ ಅಷ್ಟಕ್ಕಷ್ಟೇ ಎಂದೂ ತಿಳಿಯಲಾಗುತ್ತದೆ. ಇದೂ ಊಹಾಪೋಹವಲ್ಲ. ವಿದ್ಯಾರ್ಥಿಗಳ ಅನುಭವಕ್ಕೆ ಪಕ್ಕಾದ ವಿಚಾರ. ಇದರಿಂದಾಗಿ ಕನ್ನಡ ವಿದ್ಯಾರ್ಥಿ ಕೀಳರಿಮೆಗೆ ಒಳಗಾಗಿ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಆಸಕ್ತಿ ತೋರದಿರಬಹುದು.

ಆಳವಾಗಿ ವಿಚಾರಿಸಿದರೆ ತೋರಿಬರುವ ಇನ್ನೊಂದು ಸತ್ಯವೆಂದರೆ ಇಂಗ್ಲಿಷ್ ಮತ್ತು ಕನ್ನಡ ಎರಡೂ ಮಾಧ್ಯಮವಿರುವ ನಗರದ ಶಾಲೆಗಳಲ್ಲಿ ಸಹಾ ಪ್ರಯೋಗಶಾಲೆಯ ಸೌಲಭ್ಯ, ಆಟೋಟಗಳಲ್ಲಿ ಅವಕಾಶಗಳನ್ನು ಕೊಡುವಾಗ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗೇ ಹೆಚ್ಚು ಮನ್ನಣೆ ಸಿಗುತ್ತದೆ. ಅದರಿಂದ ಅರ್ಹತೆಗೆ ಅವಕಾಶ ಸಿಕ್ಕದೇ ಅನ್ಯಾಯವಾಗುವ ಉದಾಹರಣೆ ಇದೆ. ವಿದ್ಯಾರ್ಥಿಗಳ ಮನಸ್ಸೂ ಕುಗ್ಗಲು ಅವರು ಸಿನಿಕರಾಗಲು ಅವಕಾಶವಿದೆ.

ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಿಗಾಗುವ ಅನ್ಯಾಯವೆಂದರೆ ಸ್ವಂತ ಭಾಷೆಯಲ್ಲಿ ಸುಲಭವಾಗಿ ಕಲಿಯಬಹುದಾದ ಗಣಿತ, ವಿಜ್ಞಾನ ಮೊದಲಾದುವನ್ನೂ ಪರಕೀಯ ಭಾಷೆಯಲ್ಲಿ ಕಷ್ಟಪಟ್ಟು ಉರು ಹೊಡೆದು ಕಲಿಯಬೇಕಾಗುವುದು. ನೀವು ಯಾವುದೇ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಯನ್ನು ನೋಡಿದರೂ ಆತ/ಆಕೆ ವಿಜ್ಞಾನ, ಗಣಿತಗಳನ್ನೂ ಸಹ ಉರು ಹೊಡೆಯುವುದನ್ನು ಕಾಣಬಹುದು. ಯಾಕೆಂದರೆ ಸ್ವಂತ ಭಾಷೆಯಲ್ಲಿ ಸಹಜವಾಗಿ ನೆನಪಿಗೆ ಬರಬಹುದಾದ ವಾಕ್ಯ ಸಮುದಾಯ ಪರಕೀಯ ಭಾಷೆಯಲ್ಲಿ ಬರುವುದಿಲ್ಲ. ಈ ಸ್ಥಿತಿ ಸಾಧಾರಣವಾಗಿ ಹತ್ತನೇ ತರಗತಿಯವರೆಗೂ ಇರುವುದನ್ನು ಕಾಣಬಹುದು. ಈ ಹೊರೆಯನ್ನು ಭರಿಸಲಾರದ ಮಕ್ಕಳು ಸಹಜವಾಗಿ ಓದಿನಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ.

ಕನ್ನಡ ಮಾಧ್ಯಮದ ಮಕ್ಕಳು ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿತು ಪ್ರಾವೀಣ್ಯತೆ ಗಳಿಸಿದರೆ, ನಂತರದ ವರ್ಷಗಳಲ್ಲಿ ಕೆಲ ಪಾರಿಭಾಷಿಕ ಶಬ್ದಗಳನ್ನು ಕಲಿತು ಇಂಗ್ಲಿಷಿನಲ್ಲಿ ಸುಲಲಿತವಾಗಿ ವಾಕ್ಯರಚನೆ ಮಾಡಬಹುದು. ವಿದ್ಯಾರ್ಥಿ ಜೀವನದ ಮೊದಲ ಅಮೂಲ್ಯ ವರ್ಷಗಳಲ್ಲಿ ಉರು ಹೊಡೆಯುವುದಕ್ಕೆ ಕಾಲಹರಣ ಮಾಡುವುದು ತಪ್ಪುತ್ತದೆ.

ಇಂಗ್ಲಿಷ್ ಶಾಲೆಗೆ ಹೋಗುವ ಮಕ್ಕಳ ಪೈಕಿ ಎಲ್ಲೋ ಶೇಕಡ ಒಂದರಷ್ಟು ಜನ ಡಾಕ್ಟರ್, ಇಂಜಿನಿಯರ್ ಅಥವಾ ಐ. ಎ. ಎಸ್. ಆಗಬಹುದು. ಆ ಶೇಕಡ ಒಂದರ ಸಲುವಾಗಿ ಇಂಗ್ಲಿಷ್ ಮಾಧ್ಯಮದ ಪೀಡೆಯನ್ನು ಎಲ್ಲರಿಗೂ ಹೊರಿಸಿ ಎಳೆಯ ಮಕ್ಕಳ ಜ್ಞಾನ ಸಹಜವಾಗಿ ಬೆಳೆಯುವುದನ್ನು ಕುಂಠಿತಗೊಳಿಸಿ, ಇನ್ನೂ ಎಷ್ಟೋ ಡಾಕ್ಟರ್, ಇಂಜಿನಿಯರ್ ಅಥವಾ ಐ.ಎ.ಎಸ್‌ಗಳಾಗುವುದನ್ನು ತಪ್ಪಿಸುವುದು ಮತ್ತು ನಮ್ಮ ದೇಶಕ್ಕೆ ವೈಜ್ಞಾನಿಕವಾಗಿ ಮುಂದುವರಿಯುವ ಅವಕಾಶವನ್ನು ತಪ್ಪಿಸುವುದು, ಸಮಾಜಕ್ಕೆ ಬದ್ಧರಲ್ಲದ — ಬಿಳಿಯಾನೆಗಳ ಪಡೆಯನ್ನು ಸೃಷ್ಟಿ ಮಾಡುವುದು ಜಾಣತನದ ವಿಚಾರವಲ್ಲ. (3ನೇ ಪುಟಕ್ಕೆ)

ಪ್ರತಿಕ್ರಿಯೆ — 2

ಮಾನ್ಯರೆ,

ಕರ್ನಾಟಕದಲ್ಲಿ ಪ್ರೌಢಶಾಲೆಗಳವರೆಗಿನ ಶಿಕ್ಷಣವಾದರೂ ಕನ್ನಡ ಮಾಧ್ಯಮದಲ್ಲಿರಬೇಕೆಂಬ ವಿಚಾರದಲ್ಲಾಗಲೀ, ಈ ವಿಚಾರದ ಸಮಂಜಸತೆ-ಅಸಮಂಜಸತೆಯ ಬಗೆಗಾಗಲೀ, ಈ ಚಳುವಳಿ ರಾಜ್ಯದ ಶಿಕ್ಷಣ ನೀತಿಯಲ್ಲಿ ಉಂಟುಮಾಡಿದ ಮಾರ್ಪಾಡುಗಳ ಬಗೆಗಾಗಲೀ ಇಲ್ಲಿ ಹೊಸದಾಗಿ ಏನನ್ನೂ ಹೇಳುವ ಆಗತ್ಯವಿಲ್ಲ.

ಇಷ್ಟಾಗಿಯೂ ಇಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆ ತೆಗೆಯುವುದೇ ಆದಲ್ಲಿ, ಸಮಾಜದ ಹಿತ ದೃಷ್ಟಿಯಿಂದ ಅವರು ಇದೊಂದು ಸಲಹೆ ಅನುಸರಿಸುವುದು ಒಳಿತು. ಏನೆಂದರೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ— ಈ ಎರಡೂ ರೀತಿಯಲ್ಲಿ (ಯಾವುದಾದರೂ ಒಂದು ರೀತಿಯಲ್ಲಲ್ಲ—) ದುರ್ಬಲರಾಗಿರುವವರಿಗೆ ಅರ್ಧದಷ್ಟು ಸ್ಥಾನಗಳನ್ನು ಕಾದಿಟ್ಟು ಅವರಿಗೆ ಊಟ-ವಸತಿಯ ಸೌಕರ್ಯವನ್ನು ಉಚಿತವಾಗಿ ಒದಗಿಸಲಿ.

ಇದೆಲ್ಲಕ್ಕಿಂತಲೂ, ಒಟ್ಟಾರೆ ಸಮಾಜದ ಹಿತದ ಬಗ್ಗೆ ನಮ್ಮ ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಕಳಕಳಿ ಇದ್ದಲ್ಲಿ, ಇಂಗ್ಲಿಷ್ ಮಾಧ್ಯಮ ಶಾಲೆಗಳ ಮೂಲಕ ಸಮಾಜದ ಪ್ರತಿಷ್ಠಿತ ವರ್ಗಗಳು ತಮ್ಮ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುವುದಕ್ಕೆ ತಡೆ ಹಾಕಬೇಕು. ಅದು ಸಾಧ್ಯವಾಗದಿದ್ದರೆ, ಇಂದು ಪೇಟೆ-ಪಟ್ಟಣಗಳಿಗೆ ಸೀಮಿತವಾಗಿರುವ ಈ ಇಂಗ್ಲಿಷ್ ಮಾಧ್ಯಮವನ್ನು ಪ್ರಾಥಮಿಕ ಶಾಲೆಯಿಂದಲೇ ರಾಜ್ಯದ ಎಲ್ಲಾ ಶಾಲೆಗಳಿಗೂ ಏಕ ಶಿಕ್ಷಣ ಪದ್ಧತಿಯನ್ನಾಗಿ ಜಾರಿಗೆ ತರಬೇಕು. ಬಡವರಿಗೊಂದು, ಬಲಿಷ್ಠರಿಗೊಂದು ಮಾಧ್ಯಮ ಕೂಡದು. ಆಗ, ನಮ್ಮ ಸಮಾಜದ ಅನಿಷ್ಟ ವರ್ಗಪ್ರತಿಷ್ಠೆಯಾಗಲೀ, ಹಳ್ಳಿ-ದಿಲ್ಲಿಯವರೆಂಬ ತಾರತಮ್ಯವಾಗಲೀ ತಪ್ಪಬಹುದೆಂದು ನನ್ನ ಅನಿಸಿಕೆ.

—ಕಲ್ಕುಳಿ ವಿಠಲ ಹೆಗ್ಡೆ,
ಶೃಂಗೇರಿ.

ಪರೀಕ್ಷೆ

ವಿದ್ಯಾರ್ಥಿಗಳ
ಕಾಪಿ ಮಾಡುವ
'ಸಾಮರ್ಥ್ಯ'ವನ್ನು
ಅಳೆಯುವ
ಅಳತೆಗೋಲು!

—ಚಾವಲ್ಮನೆ ಸುರೇಶ್ ನಾಯಕ್.

ಸಾಮಾಜಿಕ ಅರಣ್ಯ ಯೋಜನೆ — ವಿಚಾರ - ವಿಮರ್ಶೆ

ಸಂಪಾದಕೀಯ

ಸರ್ಕಾರದ ಉದ್ದೇಶ ಎಷ್ಟು ಪ್ರಾಮಾಣಿಕ?

ನಮ್ಮ ರಾಜ್ಯ ಸರ್ಕಾರವು ವಿಶ್ವಬ್ಯಾಂಕ್ ಮತ್ತು ಬ್ರಿಟಿಷ್ ಸರ್ಕಾರದ 55 ಕೋಟಿ ರೂ. ಸಾಲದ ನೆರವಿನಿಂದ ರಾಜ್ಯದಲ್ಲಿ ಹಮ್ಮಿಕೊಂಡಿರುವ "ಸಾಮಾಜಿಕ ಅರಣ್ಯ ಯೋಜನೆ"ಯ ಮೂಲಕ ಸರ್ಕಾರಿ ಅರಣ್ಯದ ಹೊರಗೆ ಸರ್ಕಾರಿ ಬಂಜರು ಭೂಮಿ, ಗೋಮಾಳ ಮತ್ತು ರೈತರ ಜಮೀನುಗಳಲ್ಲಿ ಕಾಡು ಬೆಳೆಸುವುದಾಗಿ ಪ್ರಚಾರ ಮಾಡುತ್ತಿದೆ.

ಈ ಯೋಜನೆಯ ಮೂಲಕ ಬೆಳೆಯುವ 'ಅರಣ್ಯ'ದ ಎಲ್ಲಾ ಉತ್ಪತ್ತಿಯನ್ನೂ ಸ್ಥಳೀಯರ ಬಳಕೆಗೇ ಕೊಡಲಾಗುವುದೆಂದೂ ಹೇಳಲಾಗುತ್ತಿದೆ.

ಆದರೆ ಈ ಯೋಜನೆಯ ಬಗ್ಗೆ ಈಗಾಗಲೇ ಪರಿಸರ ತಜ್ಞರು ಆಳವಾದ ಅನುಮಾನ ವ್ಯಕ್ತಪಡಿಸಿದ್ದಾರೆ. ಹರಿಹರ ಪಾಲಿಫೈಬರ್ಸ್‌ನಂಥ ಕೃತಕ (ರೇಯಾನ್) ನೂಲು ತಯಾರಿಕೆಯ ಕಾರ್ಖಾನೆಗಳಿಗೆ ಮೆದು ಮರ ಒದಗಿಸಲು ಇದೊಂದು ನೆಪ ಮತ್ತು ಸಂಚು ಮಾತ್ರ ಎಂದು ಅವರು ಹೇಳುತ್ತಿದ್ದಾರೆ.

ಈ ಅನುಮಾನಗಳಿಗೆ ಕಾರಣಗಳಿಲ್ಲದೇ ಇಲ್ಲ. ಈ ಯೋಜನೆಯಲ್ಲಿ ಹೊಂಗೆ, ಬಾಗೆ, ಬೇವು, ಬೇಲ, ಮಾವು, ಹಲಸು, ಹುಣಿಸೆ ಮುಂತಾದ ಸ್ಥಳೀಯ ಸಸ್ಯ ಜಾತಿಗಳ ಹೆಸರುಗಳನ್ನು ಧಾರಾಳವಾಗಿ ಬಳಸಿದ್ದರೂ ಅಕೇಶಿಯ, ಸುಬಾಬುಲ್, ನೀಲಗಿರಿ, ಸರ್ವೆ ಮತ್ತಿತರ 'ಪರಕೀಯ' ಸಸ್ಯಗಳೂ ಪಟ್ಟಿಯಲ್ಲಿ ವಿಪುಲವಾಗಿವೆ. ಇವೆಲ್ಲ ಮಲೆನಾಡಿನ ಪರಿಸ್ಥಿತಿಗೆ ಎಷ್ಟು ನಿರಪಾಯಕರ ಎಂಬುದು ಎಲ್ಲರ ಅನುಮಾನ.

ಈ ಬಗ್ಗೆ ಪರಿಶೀಲನೆ, ಪ್ರಯೋಗ ಸರಿಯಾದ ರೀತಿಯಲ್ಲಿ ನಡೆದಿದೆಯೆ? ಇವನ್ನು ಇಲ್ಲಿ ಬೆಳೆಸಲು ಸಾಧ್ಯ ಎಂಬುದನ್ನು (ಹೇಗಾದರೂ ಮಾಡಿ) ಸಾಧಿಸಿ ತೋರಿಸುವ ದೃಷ್ಟಿ ಬಿಟ್ಟು, ಇಲ್ಲಿ ಇವುಗಳ ಪರಿಣಾಮಗಳೇನು ಎಂಬುದನ್ನು ತಿಳಿಯುವ **ಪ್ರಾಮಾಣಿಕ ಸಂಶೋಧನಾ ದೃಷ್ಟಿಯಿಂದ** ಪ್ರಯೋಗಗಳು ನಡೆದಿರಬೇಕು. ಅಲ್ಲದೆ ಡೆಹ್ರಾಡೂನಿನಲ್ಲೋ ಚಿರಾಪುಂಜಿ ಬಳಿಯೋ ಎಲ್ಲೋ ಇಷ್ಟೇ ಮಳೆ ಬೀಳುವ ಒಂದು ಪ್ರದೇಶದಲ್ಲಿ ಪ್ರಯೋಗ ನಡೆಸಿದ್ದರೆ ಅದರ ಫಲಿತಾಂಶ ಇಲ್ಲಿಗೂ ಸಮರ್ಪಕ ಎನ್ನುವುದು ಸರಿಯಾಗುವುದಿಲ್ಲ.

ಅನುಮಾನಕ್ಕೆ ಇನ್ನೊಂದು ಆಧಾರವೂ ಇದೆ. ಸ್ಥಳೀಯ ಪರಿಸ್ಥಿತಿಗೆ ಹೊಂದುವಂಥ ಮೇಲೆ ಹೇಳಿದ ಸಸ್ಯಗಳನ್ನು ಕೊಡುತ್ತೇವೆಂದು ಇಲಾಖೆ ವನ ಮಹೋತ್ಸವ ಮುಂತಾದ ಸಂದರ್ಭಗಳಲ್ಲಿ ಘೋಷಿಸಿದರೂ, ಹಳ್ಳಿಗರು ಇಲಾಖೆಗೆ ಅಥವಾ ನರ್ಸರಿಗೆ ಹೋಗಿ ಅವನ್ನು ಕೇಳಿದಾಗ "ಅವು ಮುಗಿದು ಹೋಗಿವೆ. ಬಂದಾಗ ಕೊಡುತ್ತೇವೆ. ಈಗ ಇವನ್ನು ಬೇಕಾದರೆ ತೆಗೆದುಕೊಂಡು ಹೋಗಿ" ಎಂದು ಕೆಲವು 'ಪರಕೀಯ' ಸಸಿಗಳನ್ನು ಕೊಡುತ್ತಿರುವುದು ರೈತರ ಅನುಭವಕ್ಕೆ ಬಂದಿದೆ. ಜೊತೆಗೆ ನರ್ಸರಿಯಲ್ಲಿ ಬೆಳೆಸಿರುವ ಸಸಿಗಳಲ್ಲಿ ಸಹ ಅಕೇಶಿಯ ಮುಂತಾದ 'ಪರಕೀಯ' ಜಾತಿಯವು ಯದ್ವಾತದ್ವಾ ಇದ್ದರೆ, ಸ್ಥಳೀಯ ಉಪಯುಕ್ತತೆಯ ಸಸಿಗಳು ಬಹಳ ಕಮ್ಮಿ ಕಂಡು ಬರುತ್ತವೆ. ಇದರ ಅರ್ಥವೆಲ್ಲ ಯಃಕಶ್ಚಿತ್ ಎನ್ನಲು ಬರುವುದಿಲ್ಲ.

ಇದಲ್ಲದೆ 40 ಅಂಗುಲಕ್ಕಿಂತಲೂ ಹೆಚ್ಚು ಮಳೆ ಬೀಳುವ ಮಲೆನಾಡಿನ ತಾ|| ಗಳಾದ ಕೊಪ್ಪ, ಭದ್ರಾವತಿ, ಶಿವಮೊಗ್ಗ, ಸಾಗರ, ಹೊಸನಗರ ಈ ತಾ|| ಗಳಲ್ಲಿ ಹರಿಹರ ಪಾಲಿ ಫೈಬರ್ಸ್‌ಗಾಗಿ ನೀಲಗಿರಿ ಬೆಳೆಸಲು ಸರ್ಕಾರ ಒಪ್ಪಂದ ಮಾಡಿಕೊಂಡಿದೆಯೆಂಬ ವರದಿಗಳಿದ್ದು, ಇದಕ್ಕೆ ಪರಿಸರ ತಜ್ಞರಿಂದ ವ್ಯಾಪಕವಾದ ಪ್ರತಿಭಟನೆ ಎದ್ದುಬಂದಿದೆ. ಆದರೆ ಕೊಪ್ಪ ತಾಲ್ಲೂಕಿನಲ್ಲಿ ನೀಲಗಿರಿ ಬೆಳೆಸುವುದಿಲ್ಲವೆಂದು ಡಿ. ಎಫ್. ಒ. ವಿನಯ್ ಲೂಥ್ರ ಸ್ಪಷ್ಟಪಡಿಸುತ್ತಿದ್ದಾರೆ.

ಆದ್ದರಿಂದ ಈ ಎಲ್ಲ ವಿಚಾರಗಳ ಬಗ್ಗೆ ನಿಜಸಂಗತಿ ಏನೆಂಬುದನ್ನು (ಅಗತ್ಯವಿದ್ದರೆ ಪರಿಸರ ತಜ್ಞರ ನೆರವಿನಿಂದ) ಖುದ್ದು ಪರಿಶೀಲಿಸಿ ಜನರಿಗೆ ತಿಳಿಸಬೇಕಾದ ಹೊಣೆ ಜನರ ಪ್ರತಿನಿಧಿಯಾದ ಗೋವಿಂದ ಗೌಡರದಾಗಿದೆ. ಈ ಯೋಜನೆ ಮಲೆನಾಡಿಗೆ ವಿನಾಶಕರ ಎಂದು ಕಂಡು ಬಂದರೆ ಅದನ್ನು ತಮ್ಮದೇ ಸರ್ಕಾರದ ವಿರುದ್ಧ ನಿಂತು ಪ್ರತಿರೋಧಿಸುವ **ಸ್ಥೈರ್ಯ** ಅವರಲ್ಲಿದೆಯೆ? ಜನರ ಈ ಸಕಾರಣವಾದ ಅನುಮಾನವನ್ನು ಕುರಿತು ವಿವರವಾಗಿ, ನಿಖರವಾಗಿ ಪರಿಶೀಲಿಸಿ ಅವರ ಹಿತಾಸಕ್ತಿಗೆ ಯಾವುದೇ ಧಕ್ಕೆ ಬಾರದಂತೆ ಎದ್ದು ನಿಲ್ಲುವ ಪ್ರಾಮಾಣಿಕತೆ, ಸಾಮರ್ಥ್ಯ ಅವರಲ್ಲಿವೆಯೆ?

ಅಂಥದನ್ನು ಅವರಿನ್ನೂ ತೋರಿಸಬೇಕಾಗಿದೆಯಷ್ಟೇ.

ನಿರ್ಣಯಗಳ ಬಗ್ಗೆ ಅಧಿಕಾರಿಗಳ ಹೊಣೆ

'ಸಾಮಾಜಿಕ ಅರಣ್ಯ ಯೋಜನೆ'ಯ ವಿಚಾರ ಸಂಕಿರಣದ ಉದ್ದೇಶದ ಬಗ್ಗೆ ಆರಂಭದಲ್ಲೇ ಸ್ವಲ್ಪ ಅನುಮಾನ ವ್ಯಕ್ತಪಡಿಸಲಾಯಿತು. "ಸರ್ಕಾರ ಒಂದು ಯೋಜನೆ ತಂದಿದೆ. ಅದನ್ನು ಜನರಿಗೆ ಹೇಳುವುದು ಮಾತ್ರ ಇದರ ಉದ್ದೇಶ. ಇಲ್ಲಿ ಬರುವ ಸಲಹೆ–ಬೇಡಿಕೆಗಳಿಗೆಲ್ಲ ಯಾವ ಮಹತ್ವವೂ ಇಲ್ಲ. ಎಲ್ಲಾ ಸುಮ್ಮನೆ ಕಣ್ಣೊರೆಸುವ ನಾಟಕ" ಎಂದು ಹಲವರು ಹೇಳುತ್ತಿದ್ದರು.

ಆದರೂ ಸಹ, ಎಲ್ಲರೂ ಬಹಳ ಗಹನವಾಗಿ ಯೋಚಿಸಿಯೇ ಸಲಹೆ–ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆದರೆ ಅವು ಸರ್ಕಾರದ ಮುಂದೆ ಹೋದಾಗ ಸಾಮಾನ್ಯವಾಗಿ — "ಈ ಸಲಹೆ ....ಇಂಥ ಯೋಜನೆಯಲ್ಲಿ ಈಗಾಗಲೇ ಅನುಷ್ಠಾನದಲ್ಲಿದೆ. ....ಈ ಸಲಹೆ ಸಾಧ್ಯವಿಲ್ಲವಷ್ಟು; ಕಾನೂನನ್ನೇ ಬದಲಿಸಬೇಕಾಗುತ್ತೆ...." ಮುಂತಾಗಿ ಎಲ್ಲವನ್ನೂ ಒಂದಿಲ್ಲೊಂದು ನೆಪದಿಂದ ಉನ್ನತ ಮಟ್ಟದಲ್ಲಿ ತಳ್ಳಿ ಹಾಕಲಾಗುತ್ತದೆ ಅಥವಾ ಅವನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗುತ್ತದೆ. ಇದು ಈವರೆಗಿನ ಅನುಭವ.

ಹೀಗಾಗದಿರಲಿಕ್ಕೆ ಒಂದೇ ಸಾಧ್ಯತೆಯೆಂದರೆ, ಇವನ್ನು ಸರ್ಕಾರಕ್ಕೆ ಕಳಿಸುವ ಜವಾಬ್ದಾರಿಯ ಅಧಿಕಾರಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕಾದ ಅವಶ್ಯಕತೆ ಮತ್ತು ಅದಕ್ಕೆ ಬೇಕಾಗುವ ಸಿದ್ಧತೆಗಳು ಹಾಗೂ ಅದನ್ನು ಮಾಡುವ ಸಾಧ್ಯತೆಗಳನ್ನು ಕುರಿತು ಖಚಿತವಾದ ಟಿಪ್ಪಣಿಗಳನ್ನು ಸೇರಿಸಬೇಕು.

(ನಾಲ್ಕನೇ ಪುಟಕ್ಕೆ)

ನಮ್ಮ ಬಹಿಷ್ಕಾರ

ಈ ವಿಚಾರ ಸಂಕಿರಣದ ಬಗ್ಗೆ ಮಾತ್ರವಲ್ಲ, ಈ ಯೋಜನೆಯ ಬಗೆಗೇನೆ ಆಳವಾದ ಸಂದೇಹಗಳಿದ್ದರೂ ನಾವುಗಳು ಅದರಲ್ಲಿ ಮನಃಪೂರ್ವಕವಾಗಿ ಮತ್ತು ಸಕ್ರಿಯವಾಗಿ ಪಾಲ್ಗೊಂಡೆವು. ಅದರ ಮೂಲಕ ನಮ್ಮ ರೈತ ಸಮುದಾಯಕ್ಕೆ ಹಾಗೂ ನಮ್ಮ ಅರಣ್ಯ ಪರಿಸರಕ್ಕೆ ಸ್ವಲ್ಪವಾದರೂ ಪ್ರಯೋಜನ ಆಗುವಂತಾಗಬೇಕೆಂದು ನಾವು ನಮ್ಮೆಲ್ಲ ಸಾಮರ್ಥ್ಯವನ್ನೂ ಯಾವುದೇ ಕುಹಕ–ಕೃತ್ರಿಮವಿಲ್ಲದೆ ವಿನಿಯೋಗಿಸಿದೆವು.

[ಇನ್ನೂ ಬಹಳ ಜನ ಇಷ್ಟೇ ಪ್ರಾಮಾಣಿಕವಾಗಿ ಪಾಲ್ಗೊಂಡರು. ಆದರೆ ಕೆಲವರು ಮಾತ್ರ ತಮ್ಮ ಹಿತಾಸಕ್ತಿಯ ನೇರಕ್ಕೆ ಕೆಲವು ಬೇಡಿಕೆಗಳು ನಿರ್ಣಯವಾಗುವಂತೆ ಪ್ರಯತ್ನಿಸಿದರೆ ಒಬ್ಬಿಬ್ಬರು "ನಿರ್ಣಯ ಮಾಡೋಕೆ ಏನಾಗಬೇಕ್ರಿ? ಏನು ಬೇಕಾದರೂ ನಿರ್ಣಯ ಮಾಡೋಣ...." ಎಂಬ ಮಟ್ಟದಲ್ಲೂ ವ್ಯವಹರಿಸಿದರು.]

ಹೀಗೆ ನಾವು ಪಾಲ್ಗೊಂಡಾಗ್ಯೂ, ಕಡೆಯಲ್ಲಿ ನಾನು, ನನ್ನ ಮಡದಿ ಮತ್ತು ಗೆಳೆಯ ಕಲ್ಕುಳಿ ವಿಠಲ ಹೆಗ್ಡೆ ಸಮ್ಮೇಳನವನ್ನು ಬಹಿಷ್ಕರಿಸಿ ಹೊರ ಬರಬೇಕಾಯಿತು. ಇದನ್ನು ಸ್ವಲ್ಪ ವಿವರಿಸುವುದು ಅಗತ್ಯವಾಗಿದೆ.

ನಾವು ಎರಡು ನಿರ್ಣಯಗಳನ್ನು ಮಂಡಿಸಲು ಯತ್ನಿಸಿದ್ದೆವು: ಒಂದು— ಸರ್ಕಾರ ಅರಣ್ಯ ಇಲಾಖೆಯಲ್ಲಿ ಇಂಥ ಕೋಟಿಗಟ್ಟಲೆ ರೂ. ಗಳ ಯೋಜನೆಗಳನ್ನು ಜಾರಿಗೆ ತರುವುದು ಅಥವಾ ಶಿವಬಾಲ ಯೋಗಿಯ ಪರ್ಜನ್ಯ ಜಪದಂಥ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು—ಇವೆರಡರಲ್ಲಿ ಯಾವುದಾದರೂ ಒಂದನ್ನು ಮಾತ್ರ ಮಾಡಬೇಕು. ಅತ್ತ ನಮ್ಮ ಜನರ ಅಲ್ಪ ತಿಳಿವನ್ನೂ ಗಟ್ಟಿಗೊಳಿಸುವ, ಇತ್ತ ನಮ್ಮ ತಲೆಯನ್ನು ಸಾಲದ ಶೂಲಕ್ಕೂ ಒಡ್ಡುವ–ಈ ಎರಡೂ ಕೃತ್ಯಗಳನ್ನು ಮಾಡಬಾರದು.

ಎರಡು: ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಮೇಲ್ಪಟ್ಟು ಎಲ್ಲ ಹಿರಿಯ ಸರ್ಕಾರಿ ಅಧಿಕಾರಿಗಳು ತಮ್ಮ ಮನೆಗಳಲ್ಲಿ ಬೀಟೆ, ಸಾಗುವಾನಿಯಂಥ ದುಬಾರಿ ಬೆಲೆಯ ಪೀಠೋಪಕರಣಗಳನ್ನು ಹೊಂದಿರುವುದನ್ನು ನಿಷೇಧಿಸಬೇಕು ಅಥವಾ ಕಡೇ ಪಕ್ಷ ತೀವ್ರ ಮಿತಿಗೊಳಪಡಿಸಬೇಕು.

ಈ ಎರಡೂ ವಿಚಾರಗಳು ಅರಣ್ಯಗಳ ಅಭಿವೃದ್ಧಿ ಅಥವಾ ನಾಶಕ್ಕೆ ನೇರವಾಗಿ ಸಂಬಂಧಹೊಂದಿವೆ. ಹೇಗೆಂದರೆ,

ಒಂದು: ಅಜ್ಞಾನ (ಅಥವಾ ಕುಜ್ಞಾನ!) ದಿಂದಾಗಿ ನಮ್ಮ ಜನ ಯಾವುದೇ ಒಳ್ಳೆಯ ಕೆಲಸಗಳನ್ನೂ ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ, ಸಾಂಕ್ರಾಮಿಕ ರೋಗ ಹಬ್ಬದಂತೆ ಮುನ್ನೆಚ್ಚರಿಕೆ ಕ್ರಮಗಳು, ಜನಸಂಖ್ಯೆ ನಿಯಂತ್ರಣ ಕಾರ್ಯಕ್ರಮಗಳು (ಮುಖ್ಯವಾಗಿ ಮುಸ್ಲಿಮರಲ್ಲಿ), ಮನೋರೋಗಕ್ಕೆ ಚಿಕಿತ್ಸೆ ಮುಂತಾದವುಗಳಿಗೆ ಜನ ಅಸಹಕಾರ ಒಡ್ಡುವುದು ಇಂಥ ಅಜ್ಞಾನದ ನಂಬಿಕೆಗಳಿಂದಾಗಿಯೇ. ಹಾಗೆಯೇ ಅರಣ್ಯ ಉಳಿಸುವ, ಬೆಳೆಸುವ ಯತ್ನಗಳಿಗೂ ಮೂಢನಂಬಿಕೆ ಕೊಡಲಿ ಪೆಟ್ಟಾಗಿದೆ. ಹೀಗೆ ಜಪಗಳಿಂದ ಯಥೇಚ್ಛ ಮಳೆ ಬರಿಸುವುದಾದರೆ ಅರಣ್ಯ ಇಲಾಖೆಯ ಮುಕ್ಕಾಲು ಭಾಗ [illegible] ಅದಂತೆಯೇ. ಮತ್ಯಾಕೆ ನಮ್ಮ [illegible] ಗೆ ಸಾಲದ ನೊಗ ಕಟ್ಟಬೇಕು?

ಎರಡು: ಸರ್ಕಾರಿ [illegible] ತಮ್ಮ ಲಂಚದ ಬದುಕಿನ [illegible] ವನ್ನು ದುಬಾರಿ ಪೀಠೋಪಕರಣಗಳಿಗಾಗಿ ಬಳಸುತ್ತಾರೆ. ಇದರಿಂದಾಗಿ [illegible] ಗಳಿಗೆ ಲಭ್ಯವಿದ್ದ ಬಲಿಷ್ಠ [illegible] ಈಗ [illegible] ಕೆಲಸಕ್ಕೆ [illegible] ಯಲ್ಲೇ ಖಾಲಿ. ಜೊತೆಗೆ ಈ [illegible]

(ನಾಲ್ಕನೇ ಪುಟಕ್ಕೆ)

ಇಂಗ್ಲಿಷ್ ಮಾಧ್ಯಮ

(ಎರಡನೇ ಪುಟದಿಂದ)

ದೇಶ ಭಾಷೆಗಳ ಬಗ್ಗೆ ಗೌರವವಿಲ್ಲದ, ಪ್ರಭುತ್ವವಿಲ್ಲದ ಈ ವಿದ್ಯಾವಂತ ಪೀಳಿಗೆ ತಮಗೆ ದೊರೆತಿರಬಹುದಾದ ಗ್ರಂಥಸ್ಥ ಜ್ಞಾನವನ್ನಾದರೂ ಸರಳವಾಗಿ ಸಾರ್ವಜನಿಕರಿಗೆ ತಲುಪಿಸುವುದಾಗಲೀ, ತಮ್ಮ ಸಂಶೋಧನೆ, ಪ್ರೌಢ ವಿದ್ವತ್ತನ್ನು ದೇಶಭಾಷೆಗಳಿಗೆ ವರ್ಗಾಯಿಸಿ ದೇಶಭಾಷೆಗಳಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವುದನ್ನಾಗಲೀ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಸಹಜವಾಗಿ ಜನಸಾಮಾನ್ಯರಿಗೆ ಒಂದು ರೀತಿಯ ವಿದ್ಯಾಭ್ಯಾಸ, ಮೇಲ್ವರ್ಗದವರಿಗೆ ಒಂದು ರೀತಿಯ ವಿದ್ಯಾಭ್ಯಾಸ ಎಂದಾಗಿ ಅಸಮಾನತೆ ಈ ರಂಗದಲ್ಲೂ ಹೆಚ್ಚುತ್ತದೆ ಮತ್ತು ಅದಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಕಲಿತವರೇ ಕಾರಣರಾಗುತ್ತಾರೆ.

ಆದ್ದರಿಂದ ನನ್ನ ಅಭಿಪ್ರಾಯದಂತೆ ಕನ್ನಡ ಭಾಷೆಯ ಹಿತ ದೃಷ್ಟಿಯಿಂದಲಾಗಲೀ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದಾಗಲೀ, ದೇಶದ ಹಿತದೃಷ್ಟಿಯಿಂದಲಾಗಲೀ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಅವಶ್ಯಕವಲ್ಲ.

—**ಗುಂಡಪ್ಪ** (ಶೃಂಗೇರಿ), ಮೈಸೂರು

[ಇನ್ನೂ ಕೆಲವು ಪ್ರತಿಕ್ರಿಯೆಗಳು ಮುಂದಿನ ಸಂಚಿಕೆಯಲ್ಲಿ.]

ವಿಚಾರಸಂಕಿರಣಕ್ಕೆ ನಮ್ಮ ಬಹಿಷ್ಕಾರ

(ಮೂರನೇ ಪುಟದಿಂದ)

ಹವ್ಯಾಸ ಇಂದು ಪ್ರತಿಷ್ಠೆಯ ಹುಚ್ಚಾಗಿ (ಕ್ರೇಝ್) ಕೆಳಮಟ್ಟದ ನೌಕರರಲ್ಲೂ ಸರ್ವವ್ಯಾಪಿ. ಇಂಥ ಒಂದು ಪೀಠೋಪಕರಣ ಮಾಡಿಕೊಟ್ಟವನಿಗೆ ಯಾವುದೋ ಒಂದು ಅಕ್ರಮ ಕೆಲಸ ಮಾಡಿಕೊಡುವುದು ಸಾಮಾನ್ಯ. ಅರಣ್ಯ ಇಲಾಖೆಯಲ್ಲಂತೂ ಇಂಥ ಒಂದೊಂದು ಪೀಠೋಪಕರಣಕ್ಕೂ ಇಂತಿಷ್ಟು ಅಂತ ಅಕ್ರಮ ಲೋಡುಗಳು ಸಾಗಿ ಹೋಗುತ್ತವೆ. ಇದು ಎಲ್ಲರೂ ಹೇಳುವ ಮಾತು.

ಹೀಗಿರುವಾಗ ಅಧಿಕಾರಿಗಳಿಗೆ ಈ ಬಗ್ಗೆ ಮಿತಿ ಅಥವಾ ನಿಷೇಧ ವಿಧಿಸಿದರೆ ಅರಣ್ಯ ನಾಶ ಹಕೋಟ ಮಾತ್ರವಲ್ಲ,ಬೇರೆ ಇಲಾಖೆಗಳಲ್ಲೂ ಸಹ ಒಟ್ಟಾರೆ ಲಂಚದ ಹಕೋಟೆಗೇ ನೇರವಾಗಿ ಸಹಕಾರಿಯಾಗಬಹುದು. ಅರಣ್ಯ ಇಲಾಖೆಯಲ್ಲಂತೂ ಇಂಥ ನಿಷೇಧ ಅತಿ ಮುಖ್ಯ.

ಹೀಗೆ ಅರಣ್ಯಕ್ಕೆ ಇಷ್ಟು ಸಂಬಂಧವಿರುವ ಈ ಎರಡೂ ನಿರ್ಣಯಗಳನ್ನು ಕರಡು ನಿರ್ಣಯ ಪಟ್ಟಿಯಲ್ಲೇ ಸೇರಿಸಲು ಸಂಬಂಧಪಟ್ಟ ಹಿತಾಸಕ್ತಿಗಳು ಒಪ್ಪಲಿಲ್ಲ. ನಾವು ಚರ್ಚೆ ಮಾಡಿದಾಗ ಅಧ್ಯಕ್ಷರಾದ ಪಿ. ಜಿ. ಗುರ್ಜರ್‌ರವರತ್ತ ತೋರಿಸಿದರು. ಮೊದಲ ನಿರ್ಣಯ ಈ ವೇದಿಕೆಗೇ ಅಪ್ರಸ್ತುತವೆಂದೂ, ಎರಡನೆಯದು ಅಸಂಬದ್ಧವೆಂದೂ ಅವರುಗಳ ವಾದವಾಗಿತ್ತು.

ಹೇಗೆ ಈ ನಿರ್ಣಯಗಳು ಈ ಸಮ್ಮೇಳನಕ್ಕೆ ಸಂಬಂಧಪಟ್ಟವೆ ಎಂಬುದನ್ನು ನಾವು ಜನರಿಗೆ ವಿವರಿಸುತ್ತೇವೆ. ಆಮೇಲೂ ಅವು ಬಿದ್ದು ಹೋದರೆ ಚಿಂತೆಯಿಲ್ಲ. ಕರಡಿನಲ್ಲಾದರೂ ಸೇರಿಸಲು ಅವಕಾಶ ಕೊಡಿ ಎಂದು ಎಷ್ಟು ಮನವಿ ಮಾಡಿದರೂ ಅಧ್ಯಕ್ಷರು ನಮ್ಮ ಅಭಿಪ್ರಾಯ ಸ್ವಾತಂತ್ರ್ಯವನ್ನು ಮಾನ್ಯ ಮಾಡಲಿಲ್ಲ.

ಅನಂತರ ಸಭೆ ನೆರೆದಾಗ ನಾವು ಇದಕ್ಕಾಗಿ ಒತ್ತಾಯಿಸಬೇಕಾಯಿತು. ಆದರೆ ಅಷ್ಟರಲ್ಲಿ, ಹೊಸ ವಿಚಾರಗಳು ಜನರಿಗೆ ತಿಳಿಯುವುದನ್ನು ಯಾವತ್ತೂ ಹತ್ತಿಕ್ಕುವ 'ಧರ್ಮ' ದ ಗುತ್ತಿಗೆದಾರರು ಸಾಮಾನ್ಯ ಜನರ 'ಧಾರ್ಮಿಕ' ಭಾವನೆ ಕೆರಳಿಸುವಲ್ಲಿ ಸಫಲರಾದರು. "ಪರ್ಜನ್ಯ ಜಪದಲ್ಲಿ ನಮಗೆ ನಂಬಿಕೆಯಿದೆ. ಅದನ್ನು ನೀವು ವಿರೋಧಿಸುವಂತಿಲ್ಲ" ಎಂದರು. ಅವರಿಗೆ 'ಪೀಠೋಪಕರಣಗಳ' ಜನರೂ ನೆರವಾದರು. "ನೀವು ಅದನ್ನು ನಂಬುತ್ತೀರಷ್ಟೆ. ಅದನ್ನೇ ಮಾಡಿ. ನಮಗೆ ಈ ಕೋಟಿಗಟ್ಟಲೆ ಸಾಲದ ಹೊರೆ ಹೊರಿಸುವುದನ್ನು ಮಾತ್ರ ಕೈಬಿಡಿ. ಹಾಗೆಂದೇ ನಿರ್ಣಯ ಮಾಡೋಣ" ಎಂಬ ನಮ್ಮ ವಾದಕ್ಕೆ ಸಮಂಜಸ ಉತ್ತರ ಕೊಡಲಾಗದೆ, 'ಧರ್ಮ'ದ ಗುತ್ತಿಗೆದಾರರ ನೇತೃತ್ವದಲ್ಲಿಎಲ್ಲರೂ ಒಟ್ಟಾಗಿ ಬೊಬ್ಬಿಡುತ್ತ ನಾವುಹೇಳಬೇಕೆಂದಿದ್ದನ್ನು ಪೂರ್ತಿ ಕೇಳಿಸಿಕೊಳ್ಳದೆಯೇ ಕೂಗಾಡಿದರು.

ಅಧ್ಯಕ್ಷರಾಗಲೀ, ಮಂತ್ರಿ ಗೋವಿಂದ ಗೌಡರಾಗಲಿ ನಾವು ಹೇಳಬೇಕೆಂದಿದ್ದುದನ್ನು ಪೂರ್ತಿ ಹೇಳುವ ಅವಕಾಶವನ್ನು ಕೊಡಿಸಲು ಮನಸ್ಸು ಮಾಡಲಿಲ್ಲ.

ಕರಡು ನಿರ್ಣಯದಲ್ಲಿ ಈ ವಿಷಯ ಸೇರಿಸಿದ್ದರೆ ವಾತಾವರಣ ಹೀಗೆ ಬಿಸಿಯೇರುತ್ತಿರಲಿಲ್ಲ. ವಿಷಯ 'ವಿವಾದಾತ್ಮಕ'ವಾಗುತ್ತಿರಲಿಲ್ಲ. ಆಗ ನಾವು ಶಾಂತ ರೀತಿಯಲ್ಲಿ ವಿವರಿಸಲು ಸಾಧ್ಯವಿತ್ತು. ಅದು ಕೆಲವರಿಗಾದರೂ ಅರ್ಥವಾಗುತ್ತಿತ್ತು. (ಅದೇ ಅವರೆಲ್ಲರಿಗೆ ಬೇಡವಾಗಿದ್ದುದು!)

ಹೀಗೆ ನಮ್ಮ ಅಭಿವ್ಯಕ್ತಿಯನ್ನು ಹತ್ತಿಕ್ಕಿದ ಪೂರ್ತಿ ಹೊಣೆ ಅಧ್ಯಕ್ಷರಾದ ಗುರ್ಜರ್ ಅವರದಾಗಿತ್ತು. ಇದಕ್ಕೆ ಹೆಚ್ಚುವರಿ ಕುಮ್ಮಕ್ಕು, ತಮ್ಮ ಸರ್ಕಾರದ ಎಡಬಿಡಂಗಿ ನೀತಿಗೆ ಸಮರ್ಥನೆ ನೀಡಲಾರದ, ವಿರೊಧಿಸಲೂ ಆರದ .... ಮಂತ್ರಿ ಗೋವಿಂದಗೌಡರದಾಗಿತ್ತು.

ಅಧಿಕಾರಿಗಳ ಹೊಣೆ

(ಮೂರನೇ ಪುಟದಿಂದ)

ಇಂಥ ಟಿಪ್ಪಣಿಗಳ ಒತ್ತಡ ಹಲವು ಕಡೆಗಳಿಂದ ಬರುವುದು ಮಾತ್ರವಲ್ಲದೆ, ಅನಂತರನಡೆಯುವ ಉನ್ನತಾಧಿಕಾರಿಗಳ ಸಮಾಲೋಚನಾ ಸಭೆಗಳಲ್ಲೂ ಅವನ್ನು ಪದೇ ಪದೇ ಎತ್ತಬೇಕಾಗುತ್ತದೆ. ಆಗ ಮಾತ್ರ ಸರಕಾರದ ಬಂಡೆ ಅಷ್ಟಿಷ್ಟು ಸರಿದು ಕೆಲವಾದರೂ ಸಲಹೆಗಳು ಕಾರ್ಯರೂಪಕ್ಕೆ ಬರುತ್ತವೆ. ಇದು ಸರಕಾರದ ಇಲಾಖೆಗಳ ಕಾರ್ಯವಿಧಾನವನ್ನು ಬಲ್ಲವರು ಹೇಳುವ ಅನುಭವದ ಮಾತು.

ಹಾಲಿ ಸಂದರ್ಭದಲ್ಲಿ ಈ ಹೊಣೆ ನಮ್ಮ ಡಿ.ಎಫ್.ಓ. ವಿನಯ್ ಲೂಥ್ರ ಮತ್ತು ಶಿವಮೊಗ್ಗ ಅರಣ್ಯ ಸಂರಕ್ಷಣಾಧಿಕಾರಿ ಬುಲಗಣ್ಣವರ್ ಅವರುಗಳದಾಗಿದೆ. ಈ ನಿರ್ಣಯಗಳಿಗೆ ಸರ್ಕಾರದ ಪ್ರತಿಕ್ರಿಯೆಯನ್ನು ಸಭೆಯ ಎಲ್ಲ ಆಹ್ವಾನಿತರಿಗೂ ತಿಳಿಸಲೇಬೇಕಂಬ ಸರ್ವಾನುಮತದ ನಿರ್ಣಯಕ್ಕೆ ಕಟ್ಟಿಹಾಕಲ್ಪಟ್ಟಿರುವ ಅವರುಗಳು ಈ ಸಮ್ಮೇಳನ ನಡೆಸುವಲ್ಲಿ ತಮಗಿದ್ದ ನಿಜವಾದ ಉದ್ದೇಶ ಅಥವಾ ಪ್ರೇರಣೆ ಏನೆಂಬುದನ್ನು ಈ ಟಿಪ್ಪಣಿಗಳ ಮೂಲಕ ಹೊರಗೆಡಹಲಿದ್ದಾರೆ. ಕಾದು ನೋಡೋಣ.

ಬಸ್ ಅಪಘಾತ: ಯಾತ್ರಿ ಸಾವು

ಕೊಪ್ಪ: ಹರಿಹರಪುರ ಸಮೀಪ ಸೂರ್ಳಿಬಳಿಯ ತಿರುವಿನಲ್ಲಿ ಮೇ 17ರಂದು ಸಂಜೆ ಬೀರೂರು–ಶೃಂಗೇರಿ ಶಂಕರ್ ಕಂ. ಬಸ್ಸು ಡ್ರೈವರ್ ಹತೋಟ ತಪ್ಪಿ ಮಗುಚಿ ಬಿತ್ತು. ಬಸ್ಸಿನಲ್ಲಿ ನೂರಕ್ಕೂ ಹೆಚ್ಚು ಪ್ರಯಾಣಿಕರಿದ್ದು ಬಹುತೇಕ ಜನ ಗಾಯಗೊಂಡಿದ್ದಾಗಿ ಗಾಯಾಳುಗಳು ತಿಳಿಸಿದ್ದಾರೆ. ಕೊಪ್ಪ ಆಸ್ಪತ್ರೆಯಲ್ಲಿ ವೈದ್ಯರು ಮಂತ್ರಿಗಳೊಂದಿಗೆ ಪ್ರವಾಸದಲ್ಲಿದ್ದು, ಖಾಸಗಿ ವೈದ್ಯರುಗಳಾದ ಡಾ|| ಮೋಹನಶೆಟ್ಟಿ ಮತ್ತು ಡಾ|| ಶಾನಭಾಗ್ ಗಾಯಾಳುಗಳಿಗೆ ಚಿಕಿತ್ಸೆ ನೀಡಿದರು. ಹರಿಹರಪುರದ ಸ|| ಆಸ್ಪತ್ರೆಯಲ್ಲೂ ಹಲವರಿಗೆ ಚಿಕಿತ್ಸೆ ನೀಡಲಾಯಿತು.

ಆದರೆ ಶೃಂಗೇರಿ ಯಾತ್ರೆಗೆ ಹೊರಟಿದ್ದ ಕೋಲಾರದವರೆನ್ನಲಾದ ಕುಟುಂಬವೊಂದರ ಮಹಿಳೆ ತೀವ್ರ ಗಾಯಗೊಂಡು ಮಣಿಪಾಲಕ್ಕೆ ಕರೆದೊಯ್ಯುವಾಗ ದಾರಿಯಲ್ಲಿ ಮರಣ ಹೊಂದಿದ್ದಾಗಿ ವರದಿಯಾಗಿದೆ. ಪೋಲೀಸರು ಮೊಕದ್ದಮೆ ಹೂಡಿಲ್ಲ.

ಇದೆಲ್ಲವನ್ನೂ ಆದಷ್ಟು ಸೌಮ್ಯವಾಗಿ, ಆದರೆ ಖಚಿತವಾಗಿ ಪ್ರತಿಭಟಿಸಿ ನಾವು ನಮ್ಮೆಲ್ಲ ಸಲಹೆಗಳನ್ನೂ ಹಿಂದೆಗೆದುಕೊಂಡು ಈ 'ಅಪ್ರಾಮಾಣಿಕ' ಸಮ್ಮೇಳನವನ್ನು ಬಹಿಷ್ಕರಿಸಿದೆವು.

ನಾವು ಹೇಳಿದ್ದನ್ನು ಎಲ್ಲರೂ ಒಪ್ಪಬೇಕಾಗಿತ್ತು ಎಂದೇನಲ್ಲ. ಆದರೆ ಯಾರೇ ಆಗಲಿ, ಒಂದು ಅಭಿಪ್ರಾಯ ತಿಳಿಸಲು ಇಚ್ಛಿಸಿದರೆ ಉಳಿದವರು ಮೊದಲು ಅದನ್ನು ಪೂರ್ತಿ ಕೇಳಬೇಕು (ಹೇಳಲು ಅವಕಾಶ ಕೊಡಬೇಕು.) ಅನಂತರ ಖಂಡಿಸುವುದಾಗಲಿ ತಿರಸ್ಕರಿಸುವುದಾಗಲಿ ಮಾಡಬಹುದು. ಇದು ಪ್ರಜಾಸತ್ತಾತ್ಮಕ ನಡವಳಿಕೆ ಮಾತ್ರವಲ್ಲ, ಒಂದು ಅತೀ ಅಗತ್ಯವಾದ ಸತ್ಸಂಪ್ರದಾಯ ಕೂಡ.

—ಸಿರಿಮನೆ ನಾಗರಾಜ್.

ಜನಸಂಪರ್ಕ ಸಭೆ

ಕುದುರೆಗುಂಡಿ: ಇಲ್ಲಿ ಮೇ 20 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಯಿತು.

ಗ್ರಾಮಸ್ಥರ ಕುಂದುಕೊರತೆಗಳ ಇಲಾಖಾವಾರು ಚರ್ಚೆಯಲ್ಲಿ ಮುಖ್ಯವಾಗಿ ತಲಮಕ್ಕಿ–ಕೆಸವೆ ರಸ್ತೆಯನ್ನು ಕಾಮಗಾರಿ ಇಲಾಖೆಯಿಂದ ಕೈಗೊಳ್ಳುವ ಬಗ್ಗೆ ಹಾಗೂ ಕುದುರೆಗುಂಡಿ ಕುಡಿಯುವ ನೀರಿನ ವಿತರಣೆ ಹೆಚ್ಚಿಸುವ ಬಗ್ಗೆ ತೀರ್ಮಾನಿಸಲಾಯಿತು.

ತಲಮಕ್ಕಿ ಗ್ರಾಮ ಪಂಚಾಯ್ತಿಯು ವಿಭಾಗ ಮಟ್ಟದಲ್ಲೇ ಅತ್ಯುತ್ತಮ ಪಂಚಾಯ್ತಿಯೆಂಬ ಪ್ರಶಸ್ತಿ ಪಡೆದ ಬಗ್ಗೆ ಜಿಲ್ಲಾಧಿಕಾರಿಗಳು ಪಂಚಾಯ್ತಿಯ ಮಾಜಿ ಅಧ್ಯಕ್ಷರು ಮತ್ತು ಸದಸ್ಯರನ್ನು, ಆಡಳಿತಾಧಿಕಾರಿ ಮತ್ತು ಕಾರ್ಯದರ್ಶಿಗಳನ್ನು ಅಭಿನಂದಿಸಿ ಶುಭ ಹಾರೈಸಿದರು.

ಪಂಚಾಯ್ತಿ ಮಾಜಿ ಅಧ್ಯಕ್ಷ ಪಿ.ಜಿ. ಗುರ್ಜರ್ ಸ್ವಾಗತಿಸಿದರು, ಕೃಷ್ಣ ಕುಮಾರ್ ವಂದಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ, ಚಿಕ್ಕಮಗಳೂರು

ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗೆ ಅರ್ಹ ವ್ಯಕ್ತಿಗಳನ್ನು ಮನ ಒಲಿಸಿ ಕರೆತರುವವರಿಗೆ ಹೆಚ್ಚಿನ ಪ್ರೋತ್ಸಾಹ ಧನ :–

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿಯಾದರೆ ಪ್ರಸಕ್ತ ಸಾಲಿನ ವರ್ಷಾವಧಿಯಲ್ಲಿ ಕನಿಷ್ಠ 50 ಜನರನ್ನು (ಸ್ತ್ರೀ/ಪುರುಷ); ಇತರ ಇಲಾಖೆ-ಸ್ಥಳೀಯ ಸಂಸ್ಥೆ ಸಿಬ್ಬಂದಿ ಅಥವಾ ಖಾಸಗಿ ವ್ಯಕ್ತಿಗಳಾದರೆ ಕನಿಷ್ಠ ತಲಾ 30 ಜನರನ್ನು ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗೆ ಮನ ಒಲಿಸಬೇಕು. ಹಾಗೆ ಮನ ಒಲಿಸಿದರೆ:-

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿಯವರಿಗೆ	**ಇತರ ಇಲಾಖೆ/ಸ್ಥಳೀಯ ಸಂಸ್ಥೆ ಖಾಸಗಿ ವ್ಯಕ್ತಿಗಳಿಗೆ**
ಮೊದಲ 20 ಕೇಸುಗಳಿಗೆ ತಲಾ 15 ರೂ. ನಂತೆ, ನಂತರದ 10 ಕೇಸುಗಳಿಗೆ ತಲಾ 30 ರೂ. ನಂತೆ ಅನಂತರದ 10 ಕೇಸುಗಳಿಗೆ ತಲಾ 45 ರೂ. ನಂತೆ, ಮುಂದಿನ 10 ಕೇಸುಗಳಿಗೆ ತಲಾ 60 ರೂ. ನಂತೆ ಒಟ್ಟು 1650 ರೂ. ಉತ್ತೇಜನ ಧನ	ಮೊದಲ 5 ಕೇಸುಗಳಿಗೆ ತಲಾ 15 ರೂ. ನಂತೆ, ನಂತರದ 5 ಕೇಸುಗಳಿಗೆ ತಲಾ 30 ರೂ. ನಂತೆ, ಅನಂತರದ 10 ಕೇಸುಗಳಿಗೆ ತಲಾ 45 ರೂ. ನಂತೆ, ಮುಂದಿನ 10 ಕೇಸುಗಳಿಗೆ ತಲಾ 86 ರೂ.ನಂತೆ. ಒಟ್ಟು 1275 ರೂ. ಉತ್ತೇಜನ ಧನ

ಈ ರಾಷ್ಟ್ರೀಯ ಸೇವೆಯಲ್ಲಿ ಪಾಲ್ಗೊಂಡು ಯಥೇಚ್ಛ ಉತ್ತೇಜನ ಪಡೆಯಿರಿ.

(ಸಹಿ) ಡಾ|| ಪಿ. ನಂಜುಂಡಯ್ಯ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಚಿಕ್ಕಮಗಳೂರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.